**Circular No – 099/2025**

Date: 08.12.2025

To
All Members of The Association

## MANDATORY CONTRIBUTION TO LABOUR WELFARE FUND

1. The Government of Karnataka amended section 7A of the Karnataka Labour Welfare Fund Act and inserted changes in the amount of contribution to be made by the employers as well as the employees and the revised rate of contribution are as under effective from the year 2025 onwards:
   - Rs. 50/- per employee (employee contribution)
   - Rs. 100/- per employee (employer contribution)

2. The amended provisions were circulated under KEA Circular no.009/2025 dated 13.01.2025.
3. Now Welfare Commissioner, Karnataka Labour Welfare Board have directed the factories and other establishments to remit the contribution for the year 2025 has issued a press note directing the following establishments to remit the contributions for the year 2025 on or before **15.01.2026**.
   - All factories, plantations, workshops, motor buses, rental service establishments employing 10 or more workers with power and 20 or more workers without power
   - Establishments under the Contract Labour Act 1970 employing 20 or more workers

- Establishments under the Karnataka Shops and Commercial Establishments Act 1961 and Karnataka Society Registration Act 1960, employing 50 or more workers
- All charitable trusts/organizations and societies registered under the above Acts

4. Contributions must be remitted through the portal of official Karnataka Labour Welfare Board: **https://klwbapps.karnataka.gov.in**
5. Delay in payment of contribution will attract penal interest at the rate of 12% for the first three months and after 3 months, 18% on the amount due. If on inspection, it is found that there is default on the part of the establishments, the Welfare Commissioner/Labour Department Officers may initiate legal proceedings against the defaulting establishment.
6. For any clarification in the matter, the members may contact the Labour Department at:8277291175, 8277120505, 9141602562, 9141585402, 9483710329.

A copy of the letter dated 05.12.2025 addressed by the Welfare Commissioner Karnataka Labour Welfare Board Bengaluru to the Director Information and Public Relation Department Government of Karnataka along with press note dated 05.12.2025 is enclosed for the information of members.

**For KARNATAKA EMPLOYERS' ASSOCIATION**
**Sd/**
**[B C Prabhakar]**
**President**

ಕರ್ನಾಟಕ ಸರ್ಕಾರ ಕಾರ್ಮಿಕ ಇಲಾಖೆ
**ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ**
ಕಲ್ಯಾಣ ಆಯುಕ್ತರ ಕಛೇರಿ, "ಕಾರ್ಮಿಕ ಕಲ್ಯಾಣ ಭವನ" ನಂ.48, 2ನೇ ಮಹಡಿ, ಮತ್ತಿಕೆರೆ ಮುಖ್ಯ ರಸ್ತೆ,
ಯಶವಂತಪುರ, ಬೆಂಗಳೂರು-560022. ದೂರವಾಣಿ: 080-23570266.
E-mail: welfarecommissioner123@gmail.com Website: klwb.karnataka.gov.in

ಸಂಖ್ಯೆ: ಕಕಾಕಮಂ/ಸಿ.ಆರ್-05/ವಂತಿಗೆ/ಪ.ಪ್ರ/2025-26 ದಿನಾಂಕ: 05-12-2025

ಇವರಿಗೆ,

**ನಿರ್ದೇಶಕರು**
**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**
**ವಾರ್ತಾಭವನ ಇನ್‌ಫೆಂಟ್ರಿ ರಸ್ತೆ**
**ಬೆಂಗಳೂರು-560001.**

ಮಾನ್ಯರೇ,

**ವಿಷಯ:-**ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಕಾಯ್ದೆ, 1965 ರಡಿಯಲ್ಲಿ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿಗೆ ಕಡ್ಡಾಯವಾಗಿ ವಂತಿಕೆ ಪಾವತಿಸುವ ಬಗ್ಗೆ ಪತ್ರಿಕಾ ಪ್ರಕಟಣೆ ಮಾಡುವ ಕುರಿತು.

* * * * *

ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಕಾಯ್ದೆ, 1965ರ ವ್ಯಾಪ್ತಿಗೆ ಬರುವ ಎಲ್ಲಾ ನೋಂದಾಯಿತ ಕಾರ್ಖಾನೆಗಳು, ಪ್ಲಾಂಟೇಶನ್‌ಗಳು, ಕಾರ್ಯಗಾರಗಳು, ಮೋಟಾರು ದೊಡ್ಡ ಬಸ್ ಬಾಡಿಗೆ ಸೇವೆ, ವಾಹನ ಸಾರಿಗೆ ಸಂಸ್ಥೆಗಳು, ಹಾಗೂ 50 ಮತ್ತು ಅದಕ್ಕಿಂತ ಹೆಚ್ಚಿನ ಸಿಬ್ಬಂದಿ ಮತ್ತು ಕಾರ್ಮಿಕರನ್ನು ನೇಮಿಸಿಕೊಂಡು ಕಾರ್ಯನಿರ್ವಹಿಸುತ್ತಿರುವ ವಾಣಿಜ್ಯ ಸಂಸ್ಥೆಗಳು, ಚಾರಿಟೇಬಲ್ ಸಂಸ್ಥೆಗಳು, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ- 1960ರ ಅಡಿಯಲ್ಲಿ ನೋಂದಣಿಯಾದ ಎಲ್ಲಾ ಸಂಘ ಸಂಸ್ಥೆಗಳು 2025ನೇ ಕ್ಯಾಲೆಂಡರ್ ವರ್ಷಕ್ಕೆ ಸಂಬಂಧಪಟ್ಟ ವಂತಿಗೆಯನ್ನು ಕಡ್ಡಾಯವಾಗಿ **15ನೇ ಜನವರಿ 2026** ರ ದಿನಾಂಕದೊಳಗೆ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿಗೆ ಆನ್‌ಲೈನ್ ಮುಖಾಂತರ ಪಾವತಿಸಬೇಕಾಗಿದೆ.

ಇದಕ್ಕೆ ಸಂಬಂಧಪಟ್ಟಂತೆ, ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ "ಪತ್ರಿಕಾ ಪ್ರಕಟಣೆ" ತಯಾರಿಸಿ, ಈ ಪತ್ರಕ್ಕೆ ಲಗತ್ತಿಸಿದೆ. ಈ ಪತ್ರಿಕಾ ಪ್ರಕಟಣೆಯನ್ನು ರಾಜ್ಯಾದ್ಯಂತ ಪ್ರಸಾರವಾಗುವ ಪ್ರಜಾವಾಣಿ, ಕನ್ನಡ ಪ್ರಭಾ, ಸಂಯುಕ್ತ ಕರ್ನಾಟಕ, ವಿಜಯ ಕರ್ನಾಟಕ, ಉದಯವಾಣಿ, ವಿಜಯವಾಣಿ, ಇಂಡಿಯನ್ ಎಕ್ಸ್‌ಪ್ರೆಸ್, ಡೆಕ್ಕನ್ ಹೆರಾಲ್ಡ್, ದಿ ಟೈಮ್ಸ್ ಆಫ್ ಇಂಡಿಯಾ, ಸಂಜೆವಾಣಿ ಹಾಗೂ ಈ ಸಂಜೆ ದಿನ ಪತ್ರಿಕೆಗಳಲ್ಲಿ ಉಚಿತವಾಗಿ ಪ್ರಕಟಿಸಲು ಅಗತ್ಯ ಕ್ರಮಕ್ಕಾಗಿ ಕೋರಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

ಕಲ್ಯಾಣ ಆಯುಕ್ತರು.
ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ
ಬೆಂಗಳೂರು.

**ಲಗತ್ತು:-**

ಪತ್ರಿಕಾ ಪ್ರಕಟಣೆಯ ಕನ್ನಡ ಮತ್ತು ಇಂಗ್ಲೀಷ್ ಪ್ರತಿಗಳು.

ಕರ್ನಾಟಕ ಸರ್ಕಾರ : : ಕಾರ್ಮಿಕ ಇಲಾಖೆ

# ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ, ಯಶವಂತಪುರ, ಬೆಂಗಳೂರು

**ಪತ್ರಿಕಾ ಪ್ರಕಟಣೆ** **ದಿನಾಂಕ: 05-12-2025**

1) ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಕಾಯ್ದೆ 1965ರ ವ್ಯಾಪ್ತಿಯಲ್ಲಿ ಬರುವ ಕಾರ್ಖಾನೆ ಕಾಯ್ದೆ-1948 2(ಡಿ)ಯಲ್ಲಿ ಎಲ್ಲಾ ನೋಂದಾಯಿತ ಕಾರ್ಖಾನೆಗಳು, ಪ್ಲಾಂಟೇಶನ್‌ಗಳು, ಕಾರ್ಯಗಾರಗಳು, ಮೋಟಾರು ದೊಡ್ಡ ಬಾಡಿಗೆ ಬಸ್ ಸೇವೆ, ವಿದ್ಯುತ್ತನ್ನು ಉಪಯೋಗಿಸಿ 10 ಅಥವಾ ಅದಕ್ಕಿಂತ ಹೆಚ್ಚು ಕಾರ್ಮಿಕರು ಕಾರ್ಯ ನಿರ್ವಹಿಸುವ ಹಾಗೂ ವಿದ್ಯುತ್ ಉಪಯೋಗಿಸದೇ 20 ಅಥವಾ ಅದಕ್ಕಿಂತ ಹೆಚ್ಚು ಕಾರ್ಮಿಕರು ಕೆಲಸ ನಿರ್ವಹಿಸುವ ಎಲ್ಲಾ ಕಾರ್ಖಾನೆಗಳು ಹಾಗೂ ಗುತ್ತಿಗೆ ಕಾರ್ಮಿಕ ಕಾಯ್ದೆ-1970ರ ಅಡಿಯಲ್ಲಿ 20 ಕ್ಕಿಂತ ಹೆಚ್ಚು ಕಾರ್ಮಿಕರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡಲ್ಲಿ ಮತ್ತು ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆ ಕಾಯ್ದೆ- 1961 ಹಾಗೂ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ-1960 ರ ಅಡಿಯಲ್ಲಿ 50 ಅಥವಾ ಅದಕ್ಕಿಂತ ಹೆಚ್ಚಿನ ಎಲ್ಲಾ ಸಿಬ್ಬಂದಿ ಮತ್ತು ಕಾರ್ಮಿಕರನ್ನು ನೇಮಿಸಿಕೊಂಡು ಕಾರ್ಯನಿರ್ವಹಿಸುತ್ತಿರುವ ವಾಣಿಜ್ಯ/ಐಟಿಬಿಟಿ ಸಂಸ್ಥೆಗಳು, ಚಾರಿಟೇಬಲ್/ಶಿಕ್ಷಣಸಂಸ್ಥೆಗಳು ಹಾಗೂ ಎರಡು ಕಾಯ್ದೆಗಳಡಿಯಲ್ಲಿ ನೋಂದಣಿಯಾದ ಎಲ್ಲಾ ಸಂಘ ಸಂಸ್ಥೆಗಳು ಕಡ್ಡಾಯವಾಗಿ ಆನ್‌ಲೈನ್ ಮೂಲಕ ಪ್ರತಿ ವರ್ಷ ಜನವರಿ 01 ರಿಂದ ಜನವರಿ 15ನೇ ತಾರೀಖಿನೊಳಗೆ ಮಂಡಳಿಗೆ ವಂತಿಕೆ ಪಾವತಿಸಬೇಕಾಗಿರುತ್ತದೆ.

2) **ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ60 ಶಾಸನ 2024, ಬೆಂಗಳೂರು, ದಿನಾಂಕ: 10.01.2025 ರ ತಿದ್ದುಪಡಿಯನ್ನು ಕರ್ನಾಟಕ ರಾಜ್ಯದ ವಿಶೇಷ ರಾಜ್ಯ ಪತ್ರಿಕೆಯಲ್ಲಿ ಪ್ರಕಟಗೊಳಿಸಲಾಗಿದೆ. ಈ ತಿದ್ದುಪಡಿ ಕಾಯ್ದೆಯನ್ನು ಮೂಲ ಕಾರ್ಮಿಕ ಕಲ್ಯಾಣ ನಿಧಿ ಕಾಯ್ದೆ 1965 ಸೆಕ್ಷನ್ 7ಎ ಗೆ ಸೇರಿಸಲಾಗಿದೆ.** 2025 ರ ಕ್ಯಾಲೆಂಡರ್ ವರ್ಷಕ್ಕೆ ಸರ್ಕಾರದ ಆದೇಶದಂತೆ ಪ್ರತಿ ಕಾರ್ಮಿಕರಿಂದ ರೂ.50/-ಹಾಗೂ ಮಾಲೀಕರಿಂದ 100/-ರಂತೆ ಒಬ್ಬ ಕಾರ್ಮಿಕರಿಗೆ ಒಟ್ಟು 150/-ರೂ.ಗಳನ್ನು ಕಾರ್ಖಾನೆಗಳ/ಕಾರ್ಯಸಂಸ್ಥೆಯಲ್ಲಿ ಕೆಲಸ ನಿರ್ವಹಿಸುವ ಸಿಬ್ಬಂದಿ ಮತ್ತು ಕಾರ್ಮಿಕರ ಸಂಖ್ಯೆಗನುಗುಣವಾಗಿ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿಗೆ ವಂತಿಗೆ ಪಾವತಿಸುವುದು ಕಡ್ಡಾಯವಾಗಿರುತ್ತದೆ.

3) ಈ ಕಾಯ್ದೆಯಡಿಯಲ್ಲಿ ಆನ್‌ಲೈನ್ ಮುಖಾಂತರ ವಂತಿಗೆ ಪಾವತಿಸಬೇಕಾದ ವೆಬ್‌ಸೈಟ್ ವಿಳಾಸ

**www.klwb.karnataka.gov.in**

4) ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ **ವಂತಿಗೆ ಪಾವತಿಗೆ ಕಡೆಯ ದಿನಾಂಕ: 15-01-2026 (2025 ನೇ ಕ್ಯಾಲೆಂಡರ್ ವರ್ಷಕ್ಕೆ) ನಿಯಮ ಪಾಲಿಸದ ಸಂಸ್ಥೆಗಳಿಗೆ ಮೊದಲ 3 ತಿಂಗಳಿಗೆ ಶೇಕಡ 12% ರಂತೆ ಹಾಗೂ ನಂತರದ ತಿಂಗಳಿಗೆ ಶೇಕಡ 18% ರಂತೆ ಬಡ್ಡಿಯನ್ನು ದಂಡವಾಗಿ ವಿಧಿಸಲಾಗುವುದು, ಹಾಗೂ ಕಲ್ಯಾಣ ಆಯುಕ್ತರಿಂದ ತಪಾಸಣೆ ಮತ್ತು ಕಾರ್ಮಿಕ ಇಲಾಖೆ ಅಧಿಕಾರಿಗಳಿಂದ ತನಿಖೆಗೆ ಒಳಪಡಬೇಕಾಗುತ್ತದೆ.**

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: **8277291175, 8277120505, 9141602562, 9141585402,9483710329** ಮೂಲಕ ಸಂಪರ್ಕಿಸಬಹುದು.

ಕಲ್ಯಾಣ ಆಯುಕ್ತರು,
ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ
ಬೆಂಗಳೂರು.

**GOVERNMENT OF KARNATAKA : : DEPARTMENT OF LABOUR**
**KARNATAKA LABOUR WELFARE BOARD, YESHWANTHPUR, BANGALORE**

# PRESS NOTE

**Date: 05-12-2025**

1) It is mandatory for the below mentioned establishments to remit contributions as per the Factories Act 1948 2(D) within the scope of Karnataka Labour Welfare Fund, Act 1965. All factories, plantations, workshops, Motor buses, Rental service establishments, employing 10 or more workers with power and employing 20 or more worker without power, under the purview of Contract Labour Act, 1970 employing 20 or more workers, under the purview of Karnataka Shops and Commercial Establishment Act 1961 and Karnataka Society Registration Act-1960 all commercial/ITBT establishments employing 50 or more workers, charitable trust/organizations and all the societies registered under two Acts are required to pay welfare fund online compulsorily.
2) **As per Government Notification No. DPAL 60 SHASANA 2024, BENGALURU DATED: 10-01-2025 and has been incorporated under original Act. i.e., Karnataka Labour Welfare Fund Act 1965 section 7A.** Therefore Factory/Establishment will pay contribution every year of **Rs. 50/- from each employee & Rs. 100/- from employer for each employee** i.e, **total Rs. 150/- per employee** to be remitted through **online payment only**.
3) Karnataka Labour welfare fund (Contibution) Online payment website link **https://klwbapps.karnataka.gov.in**
4) **LAST DATE FOR PAYMENT OF CONTRIBUTION: 15-01-2026 (CALENDER YEAR 2025)**

Delay in payment of Contributions will attract penal interest at the rate of 12% for first 3 months and after 3 months 18% on the amount due and inspections by the Welfare Commissioner/ Labour department Officers to initiate legal precedings for non-payment of contribution. For further clarification contact phone No.**8277291175, 8277120505, 9141602562, 9141585402, 9483710329**

**Welfare Commissioner**
Karnataka Labour Welfare Board
Bangalore.

**ಕರ್ನಾಟಕ ಸರ್ಕಾರ :: ಕಾರ್ಮಿಕ ಇಲಾಖೆ**

**ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ, ಬೆಂಗಳೂರು**

**ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿಗೆ ವಂತಿಕೆ ಪಾವತಿಸುವ ಕಾರ್ಖಾನೆಗಳು ಮತ್ತು ಕಾರ್ಯ ಸಂಸ್ಥೆಗಳ ಮಾಲೀಕರು/ಆಡಳಿತ ವರ್ಗದವರು ಗಮನಿಸಬೇಕಾದ ವಿಷಯಗಳು :**

- **ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ.60 ಶಾಸನ 2024 ಬೆಂಗಳೂರು ದಿನಾಂಕ: 10-01-2025 ರನುಸಾರ ಪ್ರತಿ ಕಾರ್ಮಿಕನ ಡಿಸೆಂಬರ್ ಮಾಹೆಯ ವೇತನದಿಂದ ರೂ. 50-00ನ್ನು ಕಡಿತಗೊಳಿಸಿ ಅದಕ್ಕೆ ಪ್ರತಿಯಾಗಿ ಮಾಲೀಕರ ರೂ. 100-00ನ್ನು ಸೇರಿಸಿ ಒಬ್ಬ ಕಾರ್ಮಿಕನ ಪರವಾಗಿ ಒಟ್ಟು ರೂ. 150-00 ಗಳನ್ನು ಪ್ರತಿ ವರ್ಷ ಜನವರಿ 1ರಿಂದ - ಜನವರಿ 15ನೇ ದಿನಾಂಕದೊಳಗೆ Online ಮೂಲಕ ಪಾವತಿಸುವುದು ಕಡ್ಡಾಯವಾಗಿರುತ್ತದೆ.**
- **Form-Dಯಲ್ಲಿ** ಕಾರ್ಖಾನೆಗಳು/ಕಾರ್ಯಸಂಸ್ಥೆಗಳು ಸಂಸ್ಥೆಯ ಸಂಪೂರ್ಣ ವಿಳಾಸ ಪುರುಷ ಮತ್ತು ಮಹಿಳಾ ಕಾರ್ಮಿಕರ ಸಂಖ್ಯೆ ಮತ್ತು ವಂತಿಕೆಯ ಮೊತ್ತ ಹಾಗೂ ದೂರವಾಣಿ/ಮೊಬೈಲ್ ಸಂಖ್ಯೆ ಮತ್ತು **E-mail** ವಿಳಾಸವನ್ನು ಕಡ್ಡಾಯವಾಗಿ ನಮೂದಿಸುವುದು. ಹಾಗೂ ಮಂಡಳಿಗೆ ವಂತಿಕೆ ನೀಡಿದ ಕಾರ್ಮಿಕರ ವಿವರವನ್ನು **Excel** ರೂಪದಲ್ಲಿ ನಮೂದಿಸುವುದು.
- ಕಾರ್ಖಾನೆ ಕಾಯ್ದೆ – 1948, ಗುತ್ತಿಗೆ ಕಾರ್ಮಿಕ ಕಾಯ್ದೆ – 1970, ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ – 1961ರಲ್ಲಿ ಕಾರ್ಮಿಕ ಇಲಾಖೆಗಳಿಂದ ಪಡೆದ ನೋಂದಣಿಯಾಗಿರುವ (Registration) ದಾಖಲಾತಿಗಳನ್ನು ಹಾಗೂ ಸಹಕಾರ ಇಲಾಖೆಯ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ – 1960 ರಲ್ಲಿ ನೋಂದಣಿಯಾಗಿರುವ ಸಂಸ್ಥೆಗಳ ದಾಖಲಾತಿಗಳನ್ನು **Online** ನಲ್ಲಿ ತಪ್ಪದೇ ನಮೂದಿಸುವುದು.
- ಕಾರ್ಖಾನೆಗಳು/ ಕಾರ್ಯಸಂಸ್ಥೆಗಳ ಪರವಾಗಿ **Auditor's Office/ Consultant** ಸಂಸ್ಥೆಯವರು ವಂತಿಕೆ ಪಾವತಿಗೆ ಸಂಬಂಧಿಸಿದ ಚೆಕ್/ಡಿ.ಡಿ.ಗಳನ್ನು ತಮ್ಮ ವೈಯಕ್ತಿಕ ಖಾತೆಗಳಿಂದ ಪಾವತಿಯಾಗುವಂತೆ ನೀಡುವ ಬದಲು **Online** ಮೂಲಕ ವಂತಿಕೆ ಪಾವತಿಸುವುದು ಕಡ್ಡಾಯವಾಗಿರುತ್ತದೆ.
- ಕಾರ್ಖಾನೆಗಳ ಆಡಳಿತವರ್ಗ/ಕಾರ್ಯಸಂಸ್ಥೆಗಳ ಮಾಲೀಕರು ಕಾರ್ಮಿಕ ಇಲಾಖೆಯ ವತಿಯಿಂದ ಪಡೆದ ನೋಂದಣಿಯಾಗಿರುವ **(Licence document)** ದಾಖಲಾತಿಗಳ ಪ್ರಕಾರ ಕ್ಯಾಲೆಂಡರ್ ವರ್ಷ ಅಂದರೆ ಜನವರಿಯಿಂದ ಡಿಸೆಂಬರ್ ತಿಂಗಳ ಅಂತ್ಯಕ್ಕೆ ಕೆಲಸ ನಿರ್ವಹಿಸಿದ ಕಾರ್ಮಿಕರ ಸಂಖ್ಯೆಗನುಗುಣವಾಗಿ ವಂತಿಕೆಯನ್ನು ಪಾವತಿಸಬೇಕಾಗಿರುತ್ತದೆ.
- ನಿಯಮ ಪಾಲಿಸದ ಕಾರ್ಖಾನೆಗಳು/ ಕಾರ್ಯಸಂಸ್ಥೆಗಳಿಗೆ ಮೊದಲ ಮೂರು ತಿಂಗಳಿಗೆ ಮಾಸಿಕ ಶೇ. **12** ರಂತೆ ಹಾಗೂ ನಂತರದ ತಿಂಗಳಿಗೆ ಮಾಸಿಕ ಶೇ. **18** ರಂತೆ ಬಡ್ಡಿಯನ್ನು ದಂಡವಾಗಿ ವಿಧಿಸಲಾಗುವುದು. ಹಾಗೂ ಕಲ್ಯಾಣ ಆಯುಕ್ತರಿಂದ **(Welfare Commissioner)** ತಪಾಸಣೆ ಮತ್ತು ಕಾರ್ಮಿಕ ಇಲಾಖೆಯ ಅಧಿಕಾರಿಗಳಿಂದ ತನಿಖೆಗೆ ಒಳಪಡಬೇಕಾಗುತ್ತದೆ.
- ಕಾರ್ಖಾನೆಗಳು/ಕಾರ್ಯಸಂಸ್ಥೆಗಳು ಸಂಸ್ಥೆಯನ್ನು ನೋಂದಾಯಿಸಲು ವಂತಿಕೆ ಮೊತ್ತ ಪಾವತಿಸಲು ಹಾಗೂ ಮಂಡಳಿಯಿಂದ ಅನುಷ್ಠಾನಗೊಳ್ಳುತ್ತಿರುವ ಕಲ್ಯಾಣ ಯೋಜನೆಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಮಂಡಳಿಯ ದೂರವಾಣಿ/ಮೊಬೈಲ್ ನಂ. 82772-91175, 82771-20505, 9141602562, 9483710329 & 9141585402 ಯನ್ನು ಸಂಪರ್ಕಿಸಬೇಕೆಂದು ಈ ಮೂಲಕ ಕೋರಲಾಗಿದೆ.

**ಕಲ್ಯಾಣ ಆಯುಕ್ತರು**
**ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ**
**ಬೆಂಗಳೂರು.**

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು
ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಶುಕ್ರವಾರ, ೧೦, ಜನವರಿ, ೨೦೨೫( ಪುಷ್ಯ , ೨೦, ಶಕವರ್ಷ, ೧೯೪೬)<br>BENGALURU, FRIDAY , 10, JANUARY , 2025 ( PUSHYA , 20, SHAKAVARSHA, 1946) | ಸಂ. ೧೯<br>No. 19 |
|---|---|---|


**DEPARTMENT OF PARLIAMENTARY AFFAIRS AND LEGISLATION SECRETARIAT**

**NOTIFICATION**

**NO: DPAL 60 SHASANA 2024, BENGALURU, DATED:10.01.2025**

The Karnataka Labour Welfare Fund (Amendment) Bill, 2024 ಇದಕ್ಕೆ 2025ರ ಜನವರಿ ತಿಂಗಳ 08ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2025ರ ಕರ್ನಾಟಕ ಅಧಿನಿಯಮ ಸಂಖ್ಯೆ: 05 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ (ಭಾಗ IV-A) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.-

## KARNATAKA ACT NO. 05 OF 2025

(First Published in the Karnataka Gazette Extra-ordinary on the 10th day of January, 2025)

## THE KARNATAKA LABOUR WELFARE FUND (AMENDMENT) ACT, 2024

(Received the assent of the Governor on the 08th day of January, 2025)

An Act further to amend the Karnataka Labour Welfare Fund Act, 1965.

Whereas it is expedient further to amend the Karnataka Labour Welfare Fund Act, 1965 (Karnataka Act 15 of 1965) for the purposes herein after appearing:

Be it enacted by the Karnataka State Legislature in the Seventy fifth year of the Republic of India as follows:-

**1. Short title and commencement.-** (1) This Act may be called the Karnataka Labour Welfare Fund (Amendment) Act, 2024.

(2) It shall come into force at once.

**2. Amendment of section 7A.-** In the Karnataka Labour Welfare Fund Act, 1965 (Karnataka Act 15 of 1965), in section 7A, in sub-section (2), for the words

"twenty rupees, forty rupees and twenty rupees", the words, "fifty rupees, one hundred rupees and fifty rupees" shall respectively be substituted.

**3. Power to remove difficulties.-** (1) If any difficulty arises in giving effect to the provisions of this Act, the Government may, by order published in the Official Gazette, make such provisions, not inconsistent with the provisions of this Act, as may appear to it to be necessary for removing the difficulty:

Provided that, no such order shall be made under this section after the expiry of a period of two years from the date of commencement of this Act.

(2) Every order made under this section shall be laid as soon as may be after it is made, before each house of the State Legislature.

By Order and in the name of
the Governor of Karnataka,
**G.SRIDHAR**
Secretary to Government
Department of Parliamentary
Affairs and Legislation

## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ
## ಅಧಿಸೂಚನೆ

**ಸಂಖ್ಯೆ: ಸಂವ್ಯಶಾಇ 60 ಶಾಸನ 2024, ಬೆಂಗಳೂರು, ದಿನಾಂಕ:10.01.2025**

ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ, 2022 (2023 ರ ಕರ್ನಾಟಕ ಅಧಿನಿಯಮ ಸಂಖ್ಯೆ: 13) ರ ಪ್ರಕರಣ 6 ರಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ the Karnataka Labour Welfare Fund (Amendment) Act, 2024 (Karnataka Act 05 of 2025) ನ ಭಾಷಾಂತರವನ್ನು ಅಧಿಕೃತ ಕನ್ನಡ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದಲ್ಲಿ (ಭಾಗ IV-A) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

**2025 ರ ಕರ್ನಾಟಕ ಅಧಿನಿಯಮ ಸಂಖ್ಯೆ: 05**

(2025 ರ ಜನವರಿ ತಿಂಗಳ 10ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ಅಧಿನಿಯಮ, 2024

(2024 ರ ಜನವರಿ ತಿಂಗಳ 08ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮೋದನೆಯನ್ನು ಪಡೆಯಲಾಗಿದೆ)

ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ, 1965ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ, 1965ನ್ನು (1965ರ ಕರ್ನಾಟಕ ಅಧಿನಿಯಮ 15) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ಅಧಿನಿಯಮ, 2024 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪ್ರಕರಣ 7ಎ ರ ತಿದ್ದುಪಡಿ.-** ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ, 1965ರ (1965ರ ಕರ್ನಾಟಕ ಅಧಿನಿಯಮ 15) 7ಎ ಪ್ರಕರಣದ (2)ನೇ ಉಪಪ್ರಕರಣದಲ್ಲಿರುವ "ಇಪ್ಪತ್ತು ರೂಪಾಯಿಗಳು, ನಲವತ್ತು ರೂಪಾಯಿಗಳು ಮತ್ತು ಇಪ್ಪತ್ತು ರೂಪಾಯಿಗಳ" ಎಂಬ ಪದಗಳಿಗೆ ಬದಲಾಗಿ "ಐವತ್ತು ರೂಪಾಯಿಗಳು, ಒಂದು ನೂರು ರೂಪಾಯಿಗಳು ಮತ್ತು ಐವತ್ತು ರೂಪಾಯಿಗಳ" ಎಂಬ ಪದಗಳನ್ನು ಅನುಕ್ರಮವಾಗಿ ಪ್ರತಿಯೋಜಿಸತಕ್ಕದ್ದು.

**3. ತೊಂದರೆಗಳನ್ನು ನಿವಾರಿಸುವ ಅಧಿಕಾರ.-** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಏನಾದರೂ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು ಆದೇಶದ ಮೂಲಕ ತೊಂದರೆಯನ್ನು ನಿವಾರಿಸುವುದಕ್ಕಾಗಿ ಅವಶ್ಯಕವೆಂದು ಕಂಡುಬರುವ ಈ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದ ಏನನ್ನಾದರೂ ಅಗತ್ಯಪಡಿಸಬಹುದಾದ ಸಂದರ್ಭದಂತೆ ಉಪಬಂಧಗಳನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳ ಅವಧಿಯ ಮುಕ್ತಾಯದ ತರುವಾಯ ಯಾವುದೇ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಅಡಿ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

The above translation of the Karnataka Labour Welfare Fund (Amendment) Act, 2024 (Karnataka Act 05 of 2025) shall be an authoritative text in Kannada language under section 6 of the Kannada Language Comprehensive Development Act, 2022 (Karnataka Act No. 13 of 2023).

**ಥಾವರ್‌ಚಂದ್ ಗೆಹ್ಲೋಟ್**
**ಕರ್ನಾಟಕದ ರಾಜ್ಯಪಾಲರು**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH